**ಕರ್ನಾಟಕ ಮೀನುಗಾರಿಕಾಅಭಿವೃದ್ಧಿ ನಿಗಮ ನಿಯಮಿತ**

( ಕರ್ನಾಟಕ ಸರಕಾರದಉದ್ಯಮ)

**ಹೊಯ್ಗೆಬಜಾರ್, ಮಂಗಳೂರು - 575001**

**E- Mail: kfdcixe@yahoo.comದೂರವಾಣಿ : (ಕಛೇರಿ) 2421281/2**

**ಫ್ಯಾಕ್ಸ್(0824) 2424560**


---

**ಸಂಖ್ಯೆ: 09/ಕ.ಮೀ.ಅ.ನಿ.ನಿ/ಎಂಕೆಟಿ/ಮತ್ಸ್ಯದರ್ಶಿನಿ ಗೋಕುಲಂ/ಲೈಸೆನ್ಸ್/2019-20 ದಿನಾಂಕ: 08.11.2019**

ಟೆಂಡರ್ ಪ್ರಕಟನೆ ಸಂಖ್ಯೆ::09/ಕ.ಮೀ.ಅ.ನಿ.ನಿ/ಎಂಕೆಟಿ/ಮತ್ಸ್ಯದರ್ಶಿನಿ ಗೋಕುಲಂ/ಲೈಸೆನ್ಸ್/2019-20 ದಿನಾಂಕ: 08.11.2019

ಮೈಸೂರಿನ ಗೋಕುಲಂ ನಲ್ಲಿರುವ ನಿಗಮದ ಮತ್ಸ್ಯದರ್ಶಿನಿ ಮೀನು ಉಪಹಾರಗೃಹವನ್ನು ಐದು ವರ್ಷಗಳ ಅವಧಿಗೆ ಲೈಸೆನ್ಸ್ ಮೇಲೆ ನಡೆಸುವ ಬಗ್ಗೆ ಆಸಕ್ತರಿಂದ ಟೆಂಡರ್ ಕರೆಯಲಾಗಿದೆ. ವಿವರಗಳು ಈ ಕೆಳಗಿನಂತಿವೆ.

| ಕ್ರ.ಸಂ | ಹೆಸರು ಮತ್ತು ವಿಳಾಸ | ಮುಂಗಡ ಭದ್ರತಾಠೇವಣಿ | ಟೆಂಡರ್ಫಾರ್ಮ್ ಬೆಲೆ (ಜಿಎಸ್‌ಟಿ ಪ್ರತೇಕ) |
|---|---|---|---|
| 1 | ಗೋಕುಲಂ ಮತ್ಸ್ಯದರ್ಶಿನಿ ಮೀನು ಉಪಹಾರಗೃಹ, ನಂ.389, ಗೋಕುಲಂ ಕಾಂಟೂರ್‌ರೋಡ್, ಪಿ.ಎಚ್.ಸಿ ಕಾಂಪ್ಲೇಕ್ಸ್, ತ್ರಿನೇತ್ರ ಸರ್ಕಲ್, ಗೋಕುಲಂ, ಮೈಸೂರು-570016 | ರೂ. 10,000/- | ರೂ.1,000/- |

1. ಟೆಂಡರ್ ಫಾರ್ಮ್ ಗಳನ್ನು ನೀಡುವ ದಿನಾಂಕ : 08.11.2019 ರಿಂದ 21.11.2019 ರ ಸಂಜೆ 4.00ಗಂಟೆಯವರೆಗೆ
2. ಮೊಹರಾದಟೆಂಡರ್ ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 21.11.2019 ಸಂಜೆ 4.30 ಗಂಟೆಯವರೆಗೆ
3. ಟೆಂಡರ್‌ತೆರೆಯುವ ದಿನಾಂಕ ಹಾಗೂ ಸ್ಥಳ: 22.11.2019 ರ ಸಂಜೆ 5.00 ಗಂಟೆಗೆ ನಿಗಮದ ಕೇಂದ್ರಕಛೇರಿ, ಮಂಗಳೂರು.

ಆಸಕ್ತರು ಟೆಂಡರ್ ಅರ್ಜಿ ನಮೂನೆ ಷರತ್ತು ಮತ್ತು ನಿಭಂದನೆಗಳನ್ನು ನಿಗಮದ ಕೇಂದ್ರಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದು.

**ವ್ಯವಸ್ಥಾಪಕ ನಿರ್ದೇಶಕರು**

**ಕರ್ನಾಟಕ ಮೀನುಗಾರಿಕಾಅಭಿವೃದ್ಧಿ ನಿಗಮ ನಿಯಮಿತ**

( ಕರ್ನಾಟಕ ಸರಕಾರದಉದ್ಯಮ)

**ಹೊಯ್ಗೆಬಜಾರ್, ಮಂಗಳೂರು - 575001**

**E- Mail: kfdcixe@yahoo.comದೂರವಾಣಿ : (ಕಛೇರಿ) 2421281/2**

**ಫ್ಯಾಕ್ಸ್(0824) 2424560**

---

**ಸಂಖ್ಯೆ: 09/ಕ.ಮೀ.ಅ.ನಿ.ನಿ/ಎಂಕೆಟಿ/ಮತ್ಸ್ಯದರ್ಶಿನಿ ಗೋಕುಲಂ/ಲೈಸೆನ್ಸ್/2019-20 ದಿನಾಂಕ: 08.11.2019**

**ಷರತ್ತು ಮತ್ತು ನಿಭಂದನೆಗಳು**

1. ಕರ್ನಾಟಕ ಮೀನುಗಾರಿಕಾಅಭಿವೃದ್ಧಿ ನಿಗಮದಿಂದ ಮೈಸೂರಿನ ಗೋಕುಲಂನಲ್ಲಿ ನಿರ್ಮಿಸಿರುವ (ಅಡಿಗೆ ಮನೆ ಉಪಕರಣಗಳು ಹಾಗೂ ಇತರ ಉಪಾಹಾರಗೃಹದ ಸಾಮಾಗ್ರಿಗಳು) ಮತ್ಸ್ಯದರ್ಶಿನಿ ಮೀನು ಉಪಾಹಾರಗೃಹವನ್ನು ದಿನಾಂಕ: 01.12.2019 ರಿಂದ 30.11.2024 ರವರೆಗೆ 5 ವರ್ಷಗಳ ಅವಧಿಗೆ ಲೈಸೆನ್ಸ್ ಮೇಲೆ ನಡೆಸಲು ಆಸಕ್ತ ಪಾರ್ಟಿಗಳಿಂದ ಟೆಂಡರ್ ಕರೆಯಲಾಗಿದೆ.

2. ಸದರಿ ಮತ್ಸ್ಯದರ್ಶಿನಿ–ಗೋಕುಲಂನ 5 ವರ್ಷಗಳ ಲೈಸೆನ್ಸ್ ಅವಧಿ ಮುಗಿದ ನಂತರ ನಿಗಮ ಹಾಗೂ ಲೈಸೆನ್ಸ್‌ದಾರರ ಪರಸ್ಪರ ಸಹಮತದೊಂದಿಗೆ ಲೈಸೆನ್ಸ್ ಅವಧಿಯನ್ನು ಮುಂದುವರಿಸುವ/ನಿರಾಕರಿಸುವ ಅಧಿಕಾರವು ವ್ಯವಸ್ಥಾಪಕ ನಿರ್ದೇಶಕರಿಗೆ ಇರುತ್ತದೆ.

3. ನಿಗಮದ ಮತ್ಸ್ಯದರ್ಶಿನಿ–ಗೋಕುಲಂ ಮೀನು ಉಪಾಹಾರಗೃಹದಲ್ಲಿ ಅಡುಗೆ ಮನೆ ಉಪಕರಣೆಗಳು ಹಾಗೂ ಇತರೆ ಉಪಾಹಾರಗೃಹದ ಸಾಮಾಗ್ರಿಗಳು ಇರುತ್ತದೆ. ಇದಲ್ಲದೇ ಇತರೇ ಅಗತ್ಯವಿರುವ ಉಪಕರಣಗಳನ್ನು ಹಾಗೂ ಪೀಠೋಪಕರಣಗಳನ್ನು ಅಗತ್ಯವಿದ್ದಲ್ಲಿ ಯಶಸ್ವಿ ಟೆಂಡರ್‌ದಾರರುತಮ್ಮ ಸ್ವಂತ ಖರ್ಚಿಯಲ್ಲಿ ಪೂರೈಸಿಕೊಳ್ಳಬೇಕು.

4. ಟೆಂಡರಿನಲ್ಲಿ ಭಾಗವಹಿಸುವ ಟೆಂಡರ್‌ದಾರರುರೂ. 10,000/- ರ ಡಿಮಾಂಡ್ ಡ್ರಾಫ್ಟನ್ನು ಪ್ರಾರಂಭಿಕ ಮುಂಗಡ ಠೇವಣಿ ಇರಿಸಿ ಟೆಂಡರಿನಲ್ಲಿ ಭಾಗವಹಿಸುವುದು.

5. ಟೆಂಡರಿನಲ್ಲಿ ಭಾಗವಹಿಸುವ ಟೆಂಡರ್‌ದಾರರುರೂ. 10,000/- ಪ್ರಾರಂಭಿಕ ಮುಂಗಡ ಠೇವಣಿಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ, ಮಂಗಳೂರು ಇವರ ಹೆಸರಿನಲ್ಲಿ ನಗದೀಕರಿಸುವ ಡಿಮಾಂಡ್ ಡ್ರಾಫ್ಟನ್ನು ಟೆಂಡರಿನೊಂದಿಗೆ ಸಲ್ಲಿಸಬೇಕು.

6. ೋರ್ತಿ ಮಾಡಿದಟೆಂಡರನ್ನುರೂ. 10,000/- ಡಿಡಿಯೊಂದಿಗೆ ಕವರಿನಲ್ಲಿರಿಸಿ ಸೀಲ್ ಮಾಡಿ "ನಿಗಮದ ಮೈಸೂರು ಗೋಕುಲಂ ಉಪಾಹಾರಗೃಹವನ್ನು ಲೈಸೆನ್ಸ್ ಮೇಲೆ ಪಡೆಯುವ ಬಗ್ಗೆ ಟೆಂಡರ್" ಎಂಬ ಮೇಲ್ಬರಹದೊಂದಿಗೆದೊಂದಿಗೆ ದಿನಾಂಕ: 22.11.2019ರ ಸಂಜೆ 4.30 ಗಂಟೆಯ ಒಳಗೆ ನಿಗಮದ ಮಂಗಳೂರಿನ ಕೇಂದ್ರ ಕಛೇರಿಗೆ ನೀಡಬೇಕು.

7. ನಿಗದಿತ ಅವಧಿಯ ನಂತರ ಬಂದ ಟೆಂಡರುಗಳನ್ನು ಹಾಗೂ ರೂ. 10,000/- ಭದ್ರತಾ ಠೇವಣಿ ಇಲ್ಲದ ಟೆಂಡರುಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಅವಧಿ ನಂತರ ಬಂದ ಅಂಚೆ/ಸ್ಪೀಡ್ ಪೋಸ್ಟ್/ಕೊರಿಯರ್ ಮುಖಾಂತರ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

8. ಟೆಂಡರಿನಲ್ಲಿ ಮಾಸಿಕ ಗರಿಷ್ಟ ಮೊತ್ತವನ್ನು (ತೆರಿಗೆ ಹೊರತುಪಡಿಸಿ) ಸೂಚಿಸಿದ ಟೆಂಡರುದಾರರನ್ನು ಯಶಸ್ವೀ ಟೆಂಡರುದಾರರೆಂದು ಪರಿಗಣಿಸಲಾಗುವುದು.

9. ಎರಡನೇ ವರ್ಷದ ಟೆಂಡರ್ ಅವಧಿಗೆ ಮೊದಲ ವರ್ಷದ ಮಾಸಿಕ ಲೈಸೆನ್ಸ್ ಫೀ ಶೇಕಡಾ 10 ರಷ್ಟು ಹೆಚ್ಚಳದೊಂದಿಗೆ ಪಾವತಿಸಲು ಸಿದ್ದರಿರಬೇಕು. ಅದರಂತೆಯೇ ೩,೪,ಹಾಗೂ ೫ನೇ ವರ್ಷದ ಮಾಸಿಕ ಲೈಸೆನ್ಸ್ ಫೀಯನ್ನು ಶೇಕಡ ೧೦ ರಷ್ಟು ಹೆಚ್ಚಳ ಮಾಡಲಾಗುವುದು.

10. ಯಶಸ್ವೀ ಟೆಂಡರುದಾರರು ಭದ್ರತಾ ಠೇವಣಿ ಬಾಬ್ತು ರೂ. 3,00,000/- ನ್ನು ಡಿಡಿ ರೂಪದಲ್ಲಿ ನೀಡಬೇಕು ಹಾಗೂ ಸದರಿ ಮೊತ್ತವನ್ನು ಲೈಸೆನ್ಸ್ ಅವಧಿ ಮುಗಿದ ನಂತರ 30 ದಿನಗಳ ಒಳಗಾಗಿ ಬಡ್ಡಿ ರಹಿತ ಲೈಸೆನ್ಸ್‌ದಾರರಿಗೆ ಪಾವತಿಸಲಾಗುವುದು.

11. ಯಶಸ್ವೀ ಟೆಂಡರುದಾರರು ತಿಂಗಳ ಬಾಡಿಗೆಯನ್ನು ಮುಂದಿನ ತಿಂಗಳ ೧೦ನೇ ತಾರೀಕಿನ ಒಳಗಡೆ ಪಾವತಿಸಿ ನಿಗಮದಿಂದ ರಶೀದಿ ಪಡೆಯತಕ್ಕದ್ದು.

12. ಮೀನು ಉಪಾಹಾರಗೃಹಕ್ಕೆ ಅಗತ್ಯವಿರುವ ಮೀನುಗಳನ್ನು ನಿಗಮದ ಗೋಕುಲಂ ಮಳಿಗೆಯ ಮುಖಾಂತರ ಖರೀದಿಸಬಹುದು.

13. ಒಮ್ಮೆಗೆ ರೂ.5,000/- ಕ್ಕೆ ಮಿಕ್ಕಿದತಾಜಾ/ಘನೀಕೃತ ಮೀನು ಮತ್ತು ಮೌಲ್ಯವರ್ಧಿತ ಮೀನಿನ ಉತ್ಪನ್ನಗಳ ಖರೀದಿ ಮೇಲೆ ಶೇಕಡಾ ೧೦ ರದರದಲ್ಲಿ ರಿಯಾಯಿತಿ ನೀಡಲಾಗುವುದು.

14. ಮೀನು ಉಪಾಹಾರಗೃಹದಲ್ಲಿಆಹಾರ ಪದಾರ್ಥಗಳ ದರಪಟ್ಟಿಯನ್ನು ನಿಗಮದೊಂದಿಗೆ ಸಮಾಲೋಚಿಸಿ ಒಪ್ಪಿಗೆ ಪಡೆದು ಹಾಕಿರಬೇಕು ಹಾಗೂ ಉತ್ತಮ ಗುಣಮಟ್ಟದ ಆಹಾರ ಪದಾರ್ಥಗಳನ್ನು ನ್ಯಾಯೋಚಿತ ಬೆಲೆಯಲ್ಲಿ ಗ್ರಾಹಕರಿಗೆ ಒದಗಿಸಬೇಕು.

15. ಮೀನು ಉಪಾಹಾರಗೃಹದ ಆವರಣದಲ್ಲಿ ಯಾವುದೇ ರೀತಿ ಯಾತಂಬಾಕು ಮತ್ತು ಧೂಮಪಾನ ಮಾಡುವ ಹಾಗೂ ಮಾದಕ ಪಾನೀಯ, ಸ್ಫೋಟಕ–ಯಾ–ಇತರೆ ಯಾವುದೇ ನಿಷೇಧಿಸಲ್ಪಟ್ಟ ಸಾಮಾಗ್ರಿಗಳನ್ನು ಶೇಖರಿಸಿಡುವುದನ್ನು ಮಾರಾಟ ಮಾಡುವುದನ್ನು ನಿಷೇಧಿಸಿದೆ.

16. ಮೀನು ಉಪಾಹಾರಗೃಹದ ವಿದ್ಯುತ್ ಮತ್ತು ನೀರಿನ ಬಿಲ್ಲುಗಳನ್ನು ಟೆಂಡರುದಾರರೇ ಪಾವತಿಸಬೇಕು.

17. ಮೀನು ಉಪಾಹಾರಗೃಹದಆವರಣದಲ್ಲಿ ಶುಚಿತ್ತ ಮತ್ತು ನೈರ್ಮಲ್ಯತೆಯನ್ನು ಕಾಪಾಡುವುದು ಹಾಗೂ ಮೀನಿನ ತ್ಯಾಜ್ಯವನ್ನು ವಿಲೇವಾರಿ ಮಾಡುವುದು ಟೆಂಡರುದಾರರ ಜವಾಬ್ದಾರಿಯಾಗಿರುತ್ತದೆ.

18. ನಿಗಮದ ಅಧಿಕಾರಿಗಳ ಭೇಟಿ ನೀಡಿದ ಸಮಯದಲ್ಲಿ ಮೀನು ಉಪಾಹಾರಗೃಹದ ವೀಕ್ಷಣೆ ಮಾಡುವಾಗ ಅವರಿಗೆ ಎಲ್ಲಾ ರೀತಿಯ ಸಹಕಾರ ನೀಡುವುದು.

19. ನಿಗಮದ ಮೀನು ಉಪಾಹಾರಗೃಹದಲ್ಲಿರುವ ಉಪಕರಣಗಳು ನಿಗಮದ ಸ್ವತ್ತಾಗಿದ್ದು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡತಕ್ಕದ್ದು ಹಾಗೂ ಲೈಸೆನ್ಸ್ ಅವಧಿ ಮುಗಿದ ನಂತರ ಎಲ್ಲಾ ಸ್ವತ್ತುಗಳನ್ನು ಉತ್ತಮ ಸ್ಥಿತಿಯಲ್ಲಿ ನಿಗಮಕ್ಕೆ ಬಿಟ್ಟುಕೊಡತಕ್ಕದ್ದು, ಯಾವುದೇ ಉಪಕರಣಗಳು ಹಾಳಾದ ಪಕ್ಷದಲ್ಲಿ ಪ್ರಚಲಿತ ಮಾರುಕಟ್ಟೆ ಮೌಲ್ಯದಂತೆ ದಂಡ ವಿಧಿಸಲಾಗುವುದು. ತಪ್ಪಿದಲ್ಲಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಸಲು ಮುಂದಿನ ಕ್ರಮ ಕೈಗೊಳ್ಳಲಾಗುವುದು.

20. ನಿಗಮದಿಂದ ನೀಡಿರುವ ಮೀನು ಉಪಾಹಾರಗೃಹದ ಉಪಕರಣಗಳ ನಿರ್ವಹಣೆಯನ್ನು ಉತ್ತಮ ರೀತಿಯಲ್ಲಿ ಮಾಡತಕ್ಕದ್ದು ಹಾಗೂ ಸದ್ರಿ ಉಪಕರಣಗಳು, ಬಿಡಿಭಾಗಗಳ ಖರೀದಿ ಹಾಗೂ ದುರಸ್ತಿಯನ್ನು ಬಾಡಿಗೆದಾರರೇ ಮಾಡಸತಕ್ಕದ್ದು ಹಾಗೂ ಸಂಬಂಧಪಟ್ಟ ವೆಚ್ಚವನ್ನು ಬಾಡಿಗೆದಾರರೇ ಭರಿಸತಕ್ಕದ್ದು..

21. ನಿಗಮದ ಉಪಾಹಾರಗೃಹದ ಫೈರ್‌ಇನ್ಸ್ಯೂರೆನ್ಸ್ ಮತ್ತು ಶಾಪ್ ಇನ್ಸ್ಯೂರೆನ್ಸ್ (Fire Insurance &Shop Insurance) ನ್ನು ಮಾಡಿಸಿ ವಿಮೆಯ ಪ್ರೀಮಿಯಂನ್ನು ಟೆಂಡರುದಾರರೇ ಪಾವತಿಸಬೇಕು.

22. ಟೆಂಡರಿನಲ್ಲಿ ಸುಸಜ್ಜಿತ ಮೀನು ಉಪಾಹಾರಗೃಹದ ಮಾಸಿಕ ಲೈಸೆನ್ಸ್ ಫೀ ಬಾಬ್ತು (ತೆರಿಗೆಯನ್ನು ಹೊರತು ಪಡಿಸಿ) ನಮೂದಿಸುವುದು.

23. ಮೀನು ಉಪಾಹಾರಗೃಹವನ್ನು ಲೈಸೆನ್ಸ್‌ದಾರರು ಸ್ವಂತಕ್ಕೆ ಉಪಯೋಗಿಸತಕ್ಕದ್ದು, ಬೇರೆಯಾವ ವ್ಯಕ್ತಿಗೂ/ಸಂಸ್ಥೆಗೂ ಒಳಗುತ್ತಿಗೆಗೆ ನೀಡಬಾರದು.

24. ಯಾವುದೇ ಕಾರಣವನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ರದ್ದುಗೊಳಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರಿಗೆ ಕಾಯ್ದಿರಿಸಲಾಗಿದೆ.

25. ಸಂಬಂಧಪಟ್ಟ ಎಲ್ಲಾ ಪರವಾನಿಗಳನ್ನು ಟೆಂಡರುದಾರರು ಪಡೆಯಬೇಕು ಹಾಗೂ ಯಾವುದೇ ಸ್ಥಳೀಯ ತೆರಿಗೆಗಳನ್ನು ಯಶಸ್ವೀ ಟೆಂಡರುದಾರರು ಪಾವತಿಸಬೇಕು.

26. ನಿಗಮಕ್ಕೆ ಯಾವುದೇ ಸಂದರ್ಭದಲ್ಲಿ ಸದ್ರಿ ಮೀನು ಉಪಾಹಾರಗೃಹ ಹಾಗೂ ಮೀನು ಮಾರಾಟ ಮಳಿಗೆಯ ಅವಶ್ಯಕತೆ ಬಿದ್ದಲ್ಲಿ ಎರಡು ತಿಂಗಳ ನೋಟೀಸಿನ ಮೇಲೆ ಯಾವುದೇ ತಕರಾರು ಮಾಡದೆ ನಿಗಮಕ್ಕೆ ಕೊಡಲು ಬದ್ಧರಿರತಕ್ಕದ್ದು. ಅಲ್ಲದೆ ಸದ್ರಿ ಮೀನು ಉಪಾಹಾರಗೃಹ ಹಾಗೂ ಮೀನು ಮಾರಾಟ ಮಳಿಗೆಯನ್ನು ಬಾಡಿಗೆ ಅವಧಿಯು ಮುಂಚಿತವಾಗಿ ಬಾಡಿಗೆದಾರರು ಬಿಡುವುದಾದಲ್ಲಿ ಮುಂಚಿತವಾಗಿ ನಿಗಮಕ್ಕೆ ಲಿಖಿತವಾಗಿ ತಿಳಿಸಲು ಬದ್ಧರಿರಬೇಕು.

27. ಎರಡು ತಿಂಗಳ ನಿರಂತರ ಬಾಡಿಗೆ ಪಾವತಿಸಲು ವಿಫಲರಾದಲ್ಲಿ 15 ದಿನಗಳ ನೋಟಿಸ್ ಉಪಾಹಾರಗೃಹವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

28. ಲೈಸೆನ್ಸ್ ಮೇಲೆ ನೀಡಿದ ಉಪಾಹಾರಗೃಹವನ್ನು ಶುಚಿಯಾಗಿಟ್ಟು ಹಾಳು ಮಾಡದ ಅಥವಾ ಆಕೃತಿಯನ್ನು ಬದಲಾವಣೆ ಮಾಡದೆ ಇತರರಿಗೆ ಏನೂ ತೊಂದರೆಯಾಗದಂತೆ ಅಥವಾ ಬೇರೆ ಯಾವುದೇ ನ್ಯಾಯ ಬಾಹಿರ ಚಟುವಟಿಗಳನ್ನು ಮಾಡದೆ ನಿರ್ವಹಿಸತಕ್ಕದ್ದು. ಒಂದು ವೇಳೆ ಮಾರ್ಪಾಡು ಮಾಡುವುದಾದಲ್ಲಿ ನಿಗಮದ ಲಿಖಿತಒಪ್ಪಿಗೆ ಪಡೆಯತಕ್ಕದ್ದು. ಅಂತಹ ನ್ಯಾಯ ಬಾರಕಂಡು ಬಂದಲ್ಲಿ ಬಾಡಿಗೆಗೆ ನೀಡಿದ ಉಪಾಹಾರಗೃಹವನ್ನು ನಿಗಮದ ವಶಕ್ಕೆ ಬಿಟ್ಟುಕೊಡಲು ಭದ್ರತಾ ಠೇವಣಿಯನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಬದ್ಧರಿರತಕ್ಕದು.

29. ಮೇಲಿನ ಷರತ್ತುಗಳಲ್ಲದೆ ನಿಗಮವು ಇನ್ನೂ ಮುಂದೆಯಾವುದೇ ಷರತ್ತುಗಳನ್ನು ಕಾಲಕಾಲಕ್ಕೆ ಅಂತಹ ಷರತ್ತುಗಳಿಗೆ ಪೂರ್ಣ ಬದ್ದರಿರತಕ್ಕದ್ದು ಹಾಗೂ ಮೇಲಿನ ಯಾವುದೇ ಷರತ್ತುಗಳನ್ನು ಉಪಾಹಾರಗೃಹವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

30. ಸದರಿ ಟೆಂಡರ್‌ನ ಸಂಬಂಧ ಯಾವುದೇ ರೀತಿಯ ಭಿನ್ನಾಭಿಪ್ರಾಯ/ತಕರಾರು ಅಥವಾ ಯಾವುದೇ ರೀತಿಯ ಯಾವುದೇ ದಾವೆಯನ್ನು ಹೊಡುವುದಿದ್ದಲ್ಲಿ ಮಂಗಳೂರಿನ ವ್ಯಾಪ್ತಿಯಲ್ಲಿ ಬರುವ ನ್ಯಾಯಾಲಯಗಳಲ್ಲಿ ಮಾತ್ರ ಮಂಡಿಸತಕ್ಕದ್ದು.

31. ಟೆಂಡರಿನಲ್ಲಿ ಮತ್ಸ್ಯದರ್ಶಿನಿ ಮೀನು ಉಪಾಹಾರಗೃಹ ಮಳಿಗೆಯನ್ನು ಬಾಡಿಗೆಗೆ ಪಡೆದುಕೊಳ್ಳುವವರು ಮೇಲೆ ತಿಳಿಸಿದ ಷರತ್ತುಗಳನ್ನು ಒಪ್ಪಿರೂ. 200/- ರ ಮೌಲ್ಯದ ಛಾಪಾ ಕಾಗದದಲ್ಲಿ ಬರೆದುಕೊಡತಕ್ಕದು.

**ವ್ಯವಸ್ಥಾಪಕ ನಿರ್ದೇಶಕರು**

## ಟೆಂಡರ್ ಫಾರ್ಮ್

**ರಿಂದ,**

**ಚಲನವಾಣಿ ಸಂಖ್ಯೆ:**

**ಇವರಿಗೆ,**

**ವ್ಯವಸ್ಥಾಪಕ ನಿರ್ದೇಶಕರು,**

**ಕರ್ನಾಟ ಮೀನುಗಾರಿಕೆಅಭಿವೃದ್ಧಿ ನಿಗಮ ನಿಯಮಿತ**

**ಹೊೖಗೆ ಬಜಾರು, ಮಂಗಳೂರು.**

**ನಿಗಮದ ಗೋಕುಲಂ ಮೀನು ಉಪಾಹಾರಗೃಹಕ್ಕೆ ನೀಡುವ ಮಾಸಿಕ ಲೈಸೆನ್ಸ್ ಫೀ:**
**(ತೆರಿಗೆ ಪ್ರತ್ಯೇಕ)**

ರೂಪಾಯಿ-----------------------------------

ಕೆಳಗೆ ಸಹಿ ಮಾಡಿರುವ ನಾನು ಈ ಮೂಲಕ ದೃಡಿಕರಿಸುವುದೇನೆಂದರೆ, ನಾನು ನಿಗಮದ ಗೋಕುಲಂ ಮೀನು ಉಪಾಹಾರಗೃಹವನ್ನು ಲೈಸೆನ್ಸ್ ಮೇಲೆ ಪಡೆಯುವ ಬಗ್ಗೆ ನಿಗಮದ ದಿನಾಂಕ: **08.11.2019**ರ ಟೆಂಡರು ಪ್ರಕಟನೆಯ ಷರತ್ತು ಮತ್ತು ನಿಭಂಧನೆಗ್ಳ ವಿವರಗಳನ್ನು ಸಂಪೂರ್ಣವಾಗಿ ಓದಿ ತಿಳಿದಿದ್ದು, ಈ ಷರತ್ತುಗಳಿಗೆ ಬದ್ದನಾಗಿರುತ್ತೇನೆ.

(ಟೆಂಡರುದಾರರ ಸಹಿ)